ಸಾಧ್ಯವಾದಷ್ಟೂ ಶಾಂತವಾಗಿ ಹರಿಯಬಿಡಬೇಕು! ಎಂದೋ ಎಲ್ಲೋ ಕೇಳಿದ ಓಂಕಾರವನ್ನು ಮನದಲ್ಲೇ ಪಠಿಸಿದ. ಮನಸ್ಸು ತಹಬಂದಿಗೆ ಬಾರದೇ ಇದ್ದಾಗ ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಜಸ್ಟಿನ್ ಬೀಬರ್‌ನ ತನ್ನ ಮೆಚ್ಚಿನ ಹಾಡು 'ಲವ್ ಯುವರ್‌ಸೆಲ್ಫ್' ಕೇಳುತ್ತಾ ಸ್ತಿಮಿತ ಕಳೆದುಕೊಂಡ ಮನಸ್ಸನ್ನು ಏಕಾಗ್ರತೆಗೆ ತರಲು ಹಾಗೇ ತನ್ನ ಬಾಲ್ಯಕ್ಕೆ ಇಣುಕಿದ.

ತಂಪಾದ ಮಣ್ಣು ನೆಲದಲ್ಲಿ ಉದುರಿದ ಮಲ್ಲಿಗೆಯ ಕಂಪು... ಶುಭ್ರ ತಂಗಾಳಿಯ ಮುಂಜಾವು... ಎಡ ಬಲ ನಿಟ್ಟಿಸುತ್ತಾ... ಅನಂತ ಹಾದಿಯಲ್ಲಿ ಯಾವ ಅವಸರವೂ ಇಲ್ಲದೆ ನಿಧಾನವಾಗಿ ನಡೆಯುತ್ತಾ ಶಾಲೆಗೆ ಹೊರಟಿರುವ ತಾನು, ಅಕ್ಕ ಮತ್ತು ತಂಗಿ... ದೇವರನಾಮ ಹಾಡುತ್ತಾ, ಮಲ್ಲಿಗೆ ಮಾಲೆ ಕಟ್ಟುತ್ತಿರುವ ತನ್ನಮ್ಮ!...

'ಅರೆ, ಅದನ್ನು ರೆಕಾರ್ಡ್ ಮಾಡಿಟ್ಟುಕೊಳ್ಳಲೇ ಇಲ್ಲವಲ್ಲಾ!'

★★★

ಬೆಳಿಗ್ಗೆ ದಡಬಡಿಸಿ ಎದ್ದು ಸರಸರ ರೆಡಿಯಾಗಿ ಆಫೀಸಿಗೆ ಹೊರಡುವುದಕ್ಕೆ ಮುಂಚೆ ಕ್ಷಣ ಇಣುಕಿದ ಕನ್ನಡಿಯಲ್ಲಿನ ಪ್ರತಿಬಿಂಬದಲ್ಲಾಗಲೇ ಎರಡು ನೆರಿಗೆಗಳು ಮೂಡಿದಂತೆ ಅನ್ನಿಸಿತವನಿಗೆ. ರಸ್ತೆಯಲ್ಲೂ ಹಾಗೇ. ಎಲ್ಲವೂ ಸುಸ್ತಾದಂತೆ ಕಾಣುತ್ತಿವೆ: ಉಬ್ಬಸ ಬಿಡುವ ಟ್ರಾಫಿಕ್, ನಿಸ್ತೇಜ ಜನಜಂಗುಳಿ, ಕೊಲ್ಲಲಿಕ್ಕಾಗಿಯೇ ಅಟ್ಟಿಸಿಕೊಂಡು ಬರುತ್ತಿರುವ ಬಿ.ಟಿ.ಎಮ್.ಬಸ್, ಸ್ಕೂಲ್ ಬಸ್, ಕಂಪೆನಿ ಬಸ್, ನುಗ್ಗುವ ಆಟೋ, ಹಾಯುವ ಓಲಾ, ಕಡ್ಡಾಯ ಹೆಲ್ಮೆಟ್‌ನಲ್ಲಿ ಬಂಧಿಗಳಾದ ಸರ್ವರೂ! ಯಾವುದೂ ಬದಲಾಗಿಲ್ಲ! ಅಥವಾ ಎಲ್ಲವೂ ಬದಲಾಗಿದೆಯೇ?

**ದಿನಗಳು ರಾಕೆಟ್ ವೇಗದಲ್ಲಿ ಚಕಚಕನೆ ಉರುಳಿಹೋಗುತ್ತಿದ್ದವು. ಆಗಲೇ ಶನಿವಾರವೂ ಮುಗಿಯುತ್ತಾ ಬಂದು ಮಲಗಿದ್ದಲ್ಲಿಂದಲೇ ಕಣ್ಣು ಗಡಿಯಾರದತ್ತ ಹೊರಳಿಸಿದಾಗ ಎದುರಿನ ಗೋಡೆಯಲ್ಲಿ ಅದು ಜೀವ ಕುಣಿಸುತ್ತಾ ನಿಂತಿತ್ತು!**

ಆಫೀಸೂ ಅಷ್ಟೇ! ಹಾಗೇ ಇದೆ! 'ಹೇ, ಡ್ಯೂಡ್!' ತಿರುಗಿ ನೋಡಿದ. 'ವಾಟ್ಸ್ ಅಪ್ ಬ್ರೋ!' ಸದಾನಂದ ಅನ್ಯಮನಸ್ಕನಾಗಿ ತನ್ನ ಸೀಟಿನಲ್ಲಿ ಕುಳಿತು ಲಾಗಿನ್ ಆಗಿ ಮೇಲ್ ಚೆಕ್ ಮಾಡುತ್ತಾ ಸುಮ್ಮನೆ ಕುಳಿತ. ಕ್ಲೈಂಟ್ಸ್ ರಿಪೋರ್ಟನ್ನ ಅವನಿಗೆ ಕಾರ್ತಿಕ್ ಅಸೈನ್ ಮಾಡಿ ಕಳುಹಿಸಿದ್ದ. ಎರಡೆರಡು ಸಲ ಓದಿದರೂ ಕ್ಲೈಂಟ್ಸ್‌ದು ಏನು ಸಮಸ್ಯೆಯೆಂದೇ ಅರ್ಥವಾಗಲಿಲ್ಲ. ಯಾವ ಮೆಸೇಜೂ ಯಾಕೋ ಅರ್ಥವೇ ಆಗುತ್ತಿಲ್ಲವೆನ್ನಿಸಿ ಸಿಕ್ಕಾಪಟ್ಟೆ ಗಾಬರಿಯಾಗಿ, ಅಕ್ಕಪಕ್ಕ ಯಾರಾದರೂ ತನ್ನನ್ನು ಗಮನಿಸುತ್ತಿದ್ದಾರೆಯೇ ಎಂದು ಪಕ್ಕ ತಿರುಗಿದ. 'ಎನ್ನ ಮಚ್ಚಾ! ಲುಕ್ಕಿಂಗ್ ವೆರಿ ಡಲ್!' ಸೆಂದಿಲ್ ಕ್ಯಾಶ್ಯುವಲ್ಲಾಗಿ ಕೇಳಿದ್ದು ತಟ್ಟನೆ ಸಿಟ್ಟು ತರಿಸಿದರೂ ಏನೂ ಹೇಳದೆ ಕಂಪ್ಯೂಟರ್‌ನಲ್ಲಿ ಮುಖ ಹುದುಗಿಸಿದ. ಟೀವಿಯಲ್ಲಿ ಗಳಿಗೆಗೊಮ್ಮೆ ಕಾಣಿಸುವ ಬ್ರೇಕಿಂಗ್ ನ್ಯೂಸ್‌ನಂತೆ ತಲೆಯಲ್ಲಿ ನಿಮಿಷಕ್ಕೊಮ್ಮೆ 'ಮಾರಣಾಂತಿಕ' ಕಣ್ಣು ಮಿಳುಕಿಸಿ ಕುಣಿದು ಕುಪ್ಪಳಿಸುತ್ತಿತ್ತು. ತಕ್ಷಣ ನಿನ್ನೆ ರಾತ್ರಿ ಹಾಕಿದ್ದ ಸ್ಟೇಟಸ್ ಏನಾಯಿತೆಂದು ನೆನಪಾಗಿ ಫೇಸ್‌ಬುಕ್ಕಿಗೆ ಎಂಟ್ರಿ ಕೊಟ್ಟ.